ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

30

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ ...

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 30|1|21

## ವಿಧಾನ ಪರಿಷತ್ ಗದ್ದಲ ಪ್ರಕರಣ । ಮಧ್ಯಂತರ ವರದಿ ಮಂಡನೆ

# 12 ಸದಸ್ಯರಿಗೆ ಕಲಾಪ ನಿರ್ಬಂಧ ಶಿಫಾರಸು

**ವಿಕ ಸುದ್ದಿಲೋಕ** ಬೆಂಗಳೂರು 30|1|21

ಡಿ.15ರಂದು ಪರಿಷತ್‌ನಲ್ಲಿ ನಡೆದ ದಾಂಧಲೆ ಮತ್ತು ಸದನ ನಿಯಮ ಉಲ್ಲಂಘನೆಗಳ ವಿಚಾರದಲ್ಲಿ 13 ಸದಸ್ಯರಿಗೆ ಎರಡು ಅಧಿವೇಶನದ ಕಲಾಪಗಳಿಗೆ ನಿರ್ಬಂಧ ಹೇರಬೇಕು ಎಂದು ಸದನ ಸಮಿತಿ ಮಧ್ಯಂತರ ವರದಿಯಲ್ಲಿ ಶಿಫಾರಸು ಮಾಡಿದೆ.

11 ಸದಸ್ಯರು ಮತ್ತು ಇಬ್ಬರು ಸಚಿವರು ಅಧಿನ ಘಟನೆಯಲ್ಲಿ ನಾನಾ ಪಾತ್ರ ವಹಿಸಿರುವುದು ಸಿಸಿ ಟಿವಿ ದಾಖಲೆ ಮತ್ತು ಅರ್ಜಿಗಳ ಹೇಳಿಕೆಯಿಂದ ದೃಢಪಟ್ಟಿದೆ. ಅಲ್ಲದೇ ನಿಯಮಗಳಂತೆ ಕರ್ತವ್ಯ ನಿರ್ವಹಿಸಲು ವಿಫಲರಾದ ಪರಿಷತ್ ಕಾರ್ಯದರ್ಶಿ ಮಹಾಲಕ್ಷ್ಮೀ ವಿರುದ್ಧ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಇಲಾಖಾ ತನಿಖೆ ನಡೆಸುವಂತೆ 84 ಪುಟಗಳ ವರದಿಯಲ್ಲಿ ಸಮಿತಿ ಶಿಫಾರಸು ಮಾಡಿದ್ದು, ತನಿಖೆ ಮುಗಿಯುವ ತನಕ ಕಾರ್ಯದರ್ಶಿ ಕೆಲಸ ನಿರ್ವಹಿಸದಂತೆ ಸೂಚಿಸಿದೆ.

ಸಮಿತಿಯ ಅಧ್ಯಕ್ಷ ಮರಿತಿಬ್ಬೇಗೌಡ ವರದಿಯನ್ನು ಸದನದಲ್ಲಿ ಮಂಡಿಸಿದರು. ಆಗ ಸಭಾನಾಯಕ ಕೋಟಾ ಶ್ರೀನಿವಾಸ ಪೂಜಾರಿ ವರದಿಯ ಕುರಿತು ಚರ್ಚೆ ನಡೆಸಲು ಅನುವು ಮಾಡಿಕೊಡಬೇಕು ಎಂದು ಕೋರಿದರು. ಆದಕ್ಕೆ ಆಕ್ಷೇಪ ಎತ್ತಿದ ಪ್ರತಿಪಕ್ಷ ನಾಯಕ ಎಸ್. ಆರ್. ಪಾಟೀಲ್, 'ಪೂರ್ಣ ವರದಿ ಬಂದ ಬಳಿಕ ಚರ್ಚೆ ನಡೆಸುವುದು ಸೂಕ್ತ' ಎಂದರು.

ಕೊನೆಗೆ ಸಭಾಪತಿ ಪ್ರತಾಪಚಂದ್ರ ಶೆಟ್ಟಿ ''ಪೂರ್ಣ ವರದಿ ಬರಲಿ ಚರ್ಚೆಗೆ ಅವಕಾಶ ನೀಡಲಾಗುವುದು'' ಎಂದು ಆದೇಶಿಸಿದರು.

**ವಿಚಾರಣೆ ಇಲ್ಲ**

ಘಟನೆ ನಡೆಯುವಾಗ ಸಭಾಪತಿ ಪೀಠದಲ್ಲಿ ಕುಳಿತಿದ್ದ ಉಪಸಭಾಪತಿ ಎಸ್.ಎಲ್. ಧರ್ಮೇಗೌಡರು ಪೀಠದಲ್ಲಿದ್ದರು. ಈಗ ಮೃತಪಟ್ಟಿರುವುದರಿಂದ ಅವರ ಮೇಲಿನ ವಿಚಾರಣೆಯನ್ನು ಸಮಿತಿ ಕೈಬಿಟ್ಟಿದೆ.

**ಪ್ರಾಣೇಶ್ ಹುದ್ದೆ ಬದಲು**

ಘಟನೆಯಲ್ಲಿ ಭಾಗಿಯಾಗಿದ್ದು, ಸದನ ಸಮಿತಿ ಶಿಫಾರಸು ಮಾಡಿದ ಹೆಸರಲ್ಲಿ ಪ್ರಾಣೇಶ್ ಹೆಸರಿದೆ. ಈಗ ಅವರು ಉಪಸಭಾಪತಿಯಾಗಿದ್ದಾರೆ. ಹೀಗಾಗಿ ಅಂತಿಮ ವರದಿಯಲ್ಲಿ ಇವರ ಮೇಲೆ ಯಾವ ರೀತಿ ಶಿಫಾರಸು ಮಾಡುತ್ತಾರೆ ಎಂಬದನ್ನು ಕಾದು ನೋಡಬೇಕಿದೆ.

ಸಂಗ್ರಹ ಚಿತ್ರ



ಪ್ರಾಣೇಶ್, ಹೊರಟ್ಟಿ, ಅರುಣ್ ಶಹಾಪೂರ, ಮಾಧುಸ್ವಾಮಿ, ವೈ.ಎ. ನಾರಾಯಣಸ್ವಾಮಿ, ಚಂದ್ರಶೇಖರ್ ಪಾಟೀಲ್, ಅಶ್ವತ್ಥನಾರಾಯಣ, ಗೋವಿಂದರಾಜ್, ನಜೀರ್ ಅಹ್ಮದ್, ಎಂ. ನಾರಾಯಣಸ್ವಾಮಿ, ಶ್ರೀನಿವಾಸ್ ಮಾನೆ, ಪ್ರಕಾಶ್ ರಾಥೋಡ್, ಕಾರ್ಯದರ್ಶಿ ಮಹಾಲಕ್ಷ್ಮೀ.

ಎಂ.ಕೆ. ಪ್ರಾಣೇಶ್, ವೈ.ಎ. ನಾರಾಯಣಸ್ವಾಮಿ, ಅರುಣ್ ಶಹಾಪುರ ಅವರು ಸಭಾಪತಿ ಸದನ ಪ್ರವೇಶಿಸದಂತೆ ದ್ವಾರ ಮುಚ್ಚುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಅಸಂಸದೀಯ ಮತ್ತು ಕಾನೂನು ಬಾಹಿರ ನಡವಳಿಕೆ ಪ್ರದರ್ಶಿಸಿದ್ದಾರೆ.

**2 ಅಧಿವೇಶನಕ್ಕೆ ನಿರ್ಬಂಧ**

ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡುವ ಮುನ್ನ ಅಧ್ಯಕ್ಷರ ಪೀಠದಲ್ಲಿ ಕಾಂಗ್ರೆಸ್‌ನ ಚಂದ್ರಶೇಖರ ಪಾಟೀಲ್ ಕುಳಿತಿದ್ದರು. ಇವರು ಪೀಠದ ಪಾವಿತ್ರ್ಯಕ್ಕೆ ಧಕ್ಕೆ ತಂದು ಅಗೌರವ ತೋರಿದ್ದಾರೆ.

**2 ಅಧಿವೇಶನಕ್ಕೆ ನಿರ್ಬಂಧ**

ಪರಿಷತ್ ನಡಾವಳಿಯ ಅರಿವಿದ್ದರೂ ಪರಿಷತ್ ಕಾರ್ಯದರ್ಶಿ ಕೆ.ಆರ್. ಮಹಾಲಕ್ಷ್ಮಿ ಅವರು ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿಲ್ಲ. ಹೀಗಾಗಿ ಘಟನೆ ನಡೆದಿದೆ.

ಅಂತಿಮ ವರದಿ ಬರುವವರೆಗೂ ಕಾರ್ಯದರ್ಶಿ ಕೆಲಸ ಮಾಡಬಾರದು. ನಿವೃತ್ತ ನ್ಯಾಯಾಧೀಶರ ಮೂಲಕ ಇಲಾಖೆ ತನಿಖೆ ನಡೆಸಬೇಕು.

ಕಾನೂನುಬಾಹಿರವಾಗಿ ಉಪಸಭಾಪತಿಯನ್ನು ಸಭಾಪತಿ ಪೀಠದ ಮೇಲೆ ಕೂರಿಸಲು ಸಚಿವರಾದ ಜೆ.ಸಿ. ಮಾಧುಸ್ವಾಮಿ ಮತ್ತು ಡಾ. ಅಶ್ವತ್ಥನಾರಾಯಣ ಮೂಲ ಪ್ರೇರಕರು. ಅವರ ಕೃತ್ಯ ಸಿ.ಡಿ ಮತ್ತು ಮಾಧ್ಯಮ ದೃಶ್ಯಗಳ ಮೂಲಕ ಸಾಬೀತಾಗಿದೆ.

ಇವರಿಗೆ ಸರಕಾರದ ಯಾವುದೇ ಜವಾಬ್ದಾರಿಯಲ್ಲಿ ಇರಬಾರದು.

ಉಪಸಭಾಪತಿಯವರನ್ನು ಪೀಠದಿಂದ ಬಲವಂತವಾಗಿ ಎಳೆದು ಹಾಕುವಲ್ಲಿ ಕಾಂಗ್ರೆಸ್‌ನ ನಜೀರ್ ಅಹ್ಮದ್, ಎಂ. ನಾರಾಯಣಸ್ವಾಮಿ, ಶ್ರೀನಿವಾಸ್ ಮಾನೆ, ಪ್ರಕಾಶ್ ರಾಥೋಡ್ ಅವರ ಕೃತ್ಯವೂ ಸಾಬೀತಾಗಿದೆ.

**1 ಅಧಿವೇಶನಕ್ಕೆ ನಿರ್ಬಂಧ**

ಉಪಸಭಾಪತಿಯವರನ್ನು ಪೀಠಕ್ಕೆ ಕುಳ್ಳಿರಿಸಲು ಮತ್ತು ಎಳೆದಾಡಿದಾಗ ಪುನಃ ಪೀಠದಲ್ಲಿ ಕೂರಿಸುವಂತೆ ಮಾಡಿದ ಪ್ರಕ್ರಿಯೆಯಲ್ಲಿ ಬಸವರಾಜ್ ಹೊರಟ್ಟಿ ಕೆ.ಟಿ. ಶ್ರೀಕಂಠೇಗೌಡ ಮತ್ತು ಗೋವಿಂದರಾಜ್ ನಿಯಮಬಾಹಿರವಾಗಿ ವರ್ತಿಸಿ, ಸದನ ನಡೆಸಲು ಯತ್ನಿಸಿದರು. ಉಪಸಭಾಪತಿಯನ್ನು ಕೆಳಗಿಳಿಸಿದ ನಂತರ ಅಶ್ವತ್ಥನಾರಾಯಣ ಜತೆ ಸೇರಿ ಶ್ರೀಕಂಠೇಗೌಡ ಮತ್ತು ಗೋವಿಂದರಾಜ್ ಮತ್ತೆ ಕೂರಿಸಲು ಯತ್ನಿಸಿದ್ದಾರೆ.

**2 ಅಧಿವೇಶನಕ್ಕೆ ನಿರ್ಬಂಧ**